**◆ ಒಬ್ಬ ಕವಿಯಾಗಿ ಪ್ರೇಮ, ಲೈಂಗಿಕತೆ ಮತ್ತು ದಾಂಪತ್ಯವನ್ನು ನಿತ್ಯದ ಜಂಜಾಟದಲ್ಲಿ ಯಾವ ರೀತಿ ವಿಂಗಡಿಸಿಕೊಳ್ಳುತ್ತೀರಿ ? ಹೊಸ ತಲೆಮಾರು ಇದನ್ನು ಹೇಗೆ ನಿಭಾಯಿಸುತ್ತಿದೆ?**

ಪ್ರೇಮ, ಲೈಂಗಿಕತೆ ಮತ್ತು ಮದುವೆ ಈ ಮೂರೂ ಯಾರಿಗಾದರೂ ಒಟ್ಟಿಗೆ ಸಿಕ್ಕರೆ ಅದು ನಿಜಕ್ಕೂ ಅದೃಷ್ಟ. ದುರದೃಷ್ಟವಶಾತ್ ಬಹಳಷ್ಟು ಜನರು ಈ ವಿಚಾರದಲ್ಲಿ ಅದೃಷ್ಟವಂತರಲ್ಲ. ಸಾಮಾನ್ಯವಾಗಿ ಹೊಸ ತಲೆಮಾರಿನವರನ್ನು ಕಂಡರೆ ನಂಗೆ ಪಾಪ ಅನ್ಸುತ್ತೆ. ಪ್ರೀತಿಗೆ ಅವರ ಬಳಿ ಕಟ್ಟ ಕಡೆಯ ಸ್ಥಾನ. ನಿಜ ಹೇಳಬೇಕೆಂದರೆ ಕೆಲವರು ಅದನ್ನ ನಂಬೋದೂ ಇಲ್ಲ. ಹಾಗಾಗಿ 40 ಮೀರಿದರೂ ಇನ್ನೂ ಒಂಟಿಯಾಗಿರುವ ಬಹಳಷ್ಟು ಜನ ನಿಮಗಿಲ್ಲಿ ಸಿಗುತ್ತಾರೆ. ಇದರ ಹೊರತಾಗಿಯೂ ಭರವಸೆ ಕೊಡುವಂತಹ ಕೆಲವು ಉದಾಹರಣೆಗಳೂ ಇವೆ.

ನಾನು ಓಪನ್ ಮ್ಯಾರೇಜಲ್ಲಿ ನಂಬಿಕೆ ಇಟ್ಟವಳು. ಹೀಗಾಗಿ ನನ್ನ ತಮ್ಮ ಹಾಗೂ ಒಬ್ಬ ಮಗನ ಜೊತೆ ವಾಸವಾಗಿರುವೆ. ಮತ್ತೆ ನಮ್ಮ ಕಾಲದ ಸಂಪ್ರದಾಯವೇ ಆಗಿರುವ ಈ ಲಿವ್ ಇನ್ ಸಂಬಂಧಗಳು ಬಲು ನಿಗೂಢ. ಅವು ಕೊಡುವ ವಿಚಿತ್ರ ಖುಷಿ, ತಲ್ಲಣ, ಒಳ ಹೊಡೆತ ಮತ್ತು ದುಗುಡ ಎಲ್ಲವನ್ನೂ ಸಮಚಿತ್ತದಿಂದ ಸ್ವೀಕರಿಸಲು ನಮ್ಮ ಮನಸ್ಸನ್ನು ತರಬೇತುಗೊಳಿಸಲೇಬೇಕು. ಯಾಕೆಂದರೆ ಈ ಸೃಷ್ಟಿ ಗಂಡು ಮತ್ತು ಹೆಣ್ಣು ಇಬ್ಬರನ್ನೂ ಅಸಹಾಯಕರನ್ನಾಗಿಸಿದೆ. ಕ್ಷಣಕಾಲ ತಮ್ಮ ಬೆಟ್ಟದಂತಹ ಅಹಂ ಬದಿಗಿಟ್ಟು ಒಂದು ಕಾಮನ್ ಸ್ಪೇಸ್‌ಗಾಗಿ ಕಾಯುವಂತೆ ಮಾಡಿದೆ. ಸದ್ಯಕ್ಕೆ ಹೆಣ್ಣಾಗಿ ಹುಟ್ಟಿದವರು ಲಿವಿಂಗ್ ರೂಮ್ ಸಾರುವ ಸತ್ಯ ಮತ್ತು ಬೆಡ್‌ರೂಂಗೆ ಗೊತ್ತಿರುವ ಸತ್ಯದ ನಡುವೆ ಭಾವನಾತ್ಮಕ ಪೆಂಡೊಲಮ್ ಆಗಿ ತೂಗುಯ್ಯಾಲೆ ಆಡಲೇಬೇಕಾಗಿದೆ. ದುಡಿಯುವ ಗಂಡಸಿನ ಹಾಗೆ ಮೈ-ಮನಗಳ ದ್ವಂದ್ವ ಮೀರದೇ ಇವತ್ತಿನ ಔದ್ಯೋಗಿಕ ಮಹಿಳೆಗೆ ಬಿಡುಗಡೆಯಿಲ್ಲ.

ನಾನು Single parent ಆಗಿರೋದ್ರಿಂದ ಮನೆಯ ಎಲ್ಲಾ ಜವಾಬ್ದಾರಿ ನನ್ನದೇ. ಈ ನಿಟ್ಟಿನಲ್ಲಿ ನನ್ನ ಕವಿತೆಗಳಿಗೆ ಹಲವು ಅರ್ಥದ ಪದರಗಳು ಇವೆ ಅಂದುಕೊಂಡಿದ್ದೇನೆ. ಮತ್ತೆ ಓದುಗರು ಹತ್ತು ಹಲವು ರೀತಿಗಳಲ್ಲಿ ಅವುಗಳನ್ನು ವ್ಯಾಖ್ಯಾನಿಸುತ್ತಾರೆ.

**◆ ನಿತ್ಯದ ಜಂಜಾಟದಲ್ಲಿ ಹೆಣ್ಣು ಒಳಗೂ ಹೊರಗೂ ದುಡಿಯುವವಳಾಗಿ, ತನ್ನ ದೈಹಿಕ ಹಾಗೂ ಮಾನಸಿಕ ಸಮತೋಲನವನ್ನು ಕಾಪಾಡಿಕೊಂಡು ಖುಷಿಯಾಗಿರುವುದು ಹೇಗೆ?**

ಒಂದೇ ಒಂದು ದಾರಿ ಇರುವುದು: ತೃಪ್ತಿಯಾಗುವಂತಹ, ಹೆಮ್ಮೆ ಅನಿಸುವಂತಹ, ತನ್ನನ್ನು ತಾನು ಲಿಬರೇಟ್ ಮಾಡಿಕೊಳ್ಳಲು ಅವಕಾಶ ಇರುವಂತಹ ಕುಟುಂಬ, ಕೆಲಸ ಹಾಗೂ ಸಹೋದ್ಯೋಗಿಯನ್ನು ಆಕೆ ಪಡೆಯುವುದು. ನೀವು ಹೇಳಿದ ಹಾಗೆ 'ಖುಷಿ' ಅದು ನಮ್ಮ ಮೂಲಭೂತ ವಸ್ತುವಾಗಬೇಕಿತ್ತು. ಆದರೆ ನಾನು ಗಮನಿಸಿದಂತೆ ಅಬ್ಬರದ ಬಯಕೆಯಾಗಿದೆ. ಬಹಳಷ್ಟು ಜನ ತಾವು ಖುಷಿಯಾಗಿದ್ದೇವೆ ಅಂತ ಹೇಳೋದೇ ಇಲ್ಲ. ಹಾಗೆ ನೋಡಿದರೆ ನಮ್ಮ ದೇಶದಲ್ಲಿ ನಿರಂತರವಾದ ದಬ್ಬಾಳಿಕೆಯೇನೂ ಇಲ್ಲ. ಗಂಡು ಮತ್ತು ಹೆಣ್ಣು ಇಬ್ಬರೂ ಇಲ್ಲಿ ಸಮಾನರು. ಅನೇಕ ಮಹಿಳೆಯರೊಂದಿಗೆ, ಪುರುಷರೊಂದಿಗೆ ನಾನು ಸಾಕಷ್ಟು ಒಡನಾಡಿದ್ದೇನೆ. ನನ್ನ ಪ್ರಕಾರ ಇಬ್ಬರಿಗೂ ಪ್ರೀತಿ, ಕಾಳಜಿಯ ಅಗತ್ಯವಿದೆ. ಕೇವಲ ಲೈಂಗಿಕ ವಸ್ತುಗಳಾಗೋದು ಇಬ್ಬರಿಗೂ ಬೇಕಿಲ್ಲ.

**◆ ಈಗಲೂ ಕಾವ್ಯಕ್ಕೆ ನಿಮ್ಮಲ್ಲಿ ಓದುಗರು ಸಿಗುತ್ತಾರಾ?**

ಕಾವ್ಯವನ್ನು ಗಂಭೀರವಾಗಿ ಪರಿಗಣಿಸಿರುವ ಕವಿಗಳನ್ನು ಗೌರವದಿಂದ ಕಾಣುವ ಸಂಪ್ರದಾಯ ಈಗಲೂ ಇದೆ. ಕೆಲವು ಪ್ರಶಸ್ತಿಗಳು ಅನರ್ಹರ ಕೈ ಸೇರುವುದನ್ನು ಮಾತ್ರ ನಾನು ಸಹಿಸುವುದಿಲ್ಲ. ವೈಯಕ್ತಿಕವಾಗಿ ಜನಸಾಮಾನ್ಯರು ನನ್ನ ಏಕೈಕ ಪ್ರಕಟಿತ ಕೃತಿ 'While life Sees a Dream' ಅನ್ನು ಕೊಂಡುಕೊಳ್ಳುವ ಸಲುವಾಗಿ ನನಗೆ ಪತ್ರ ಬರೆದಾಗ, ಮತ್ತದು ಪುಸ್ತಕದಂಗಡಿಗಳಲ್ಲಿ ಭರ್ಜರಿಯಾಗಿ ಮಾರಾಟವಾಗಿದೆ, ಈಗದರ ಪ್ರತಿಗಳು ಸಿಗುತ್ತಿಲ್ಲ ಎಂದು ಹೇಳಿದಾಗ ನನಗೆ ತುಂಬಾ ಖುಷಿಯಾಗುತ್ತದೆ. ನಾನವರಿಗೆ ನನ್ನ ಪದ್ಯಗಳ PDF ಕಳಿಸುತ್ತೇನೆ. ಸದ್ಯ ಈ ಕವನ ಸಂಕಲನ ಮರು ಮುದ್ರಣ ಕಾಣಬಹುದು ಅನ್ಸುತ್ತೆ. ಪ್ರಸ್ತುತ ಹೊಸ ಪುಸ್ತಕ ಬರೆಯುವ ಕೆಲಸದಲ್ಲಿ ನಾನು ತೊಡಗಿಕೊಂಡಿದ್ದೇನೆ.